೨೫	ನಾಗರಮುನ್ನೋಳಿ	೮೩,೯೦	೪೨,೦೦೦
೨೬	ಕಬ್ಬೂರ	೮೬,೦೦೦	೪೩,೦೦೦
೨೭	ಕರಗಾಂವ	೮೧,೮೦೦	೪೧,೦೦೦
೨೮	ಕರೋಶಿ	೯೧,೬೦೨	೪೫,೮೦೦
೨೯	ಮಜಲಟ್ಟಿ	೭೦,೦೦೦	೩೫,೦೭೦
	ಒಟ್ಟು ರೂ.	೭೫,೭೮,೩೦೦	೦೨,೯೫,೦೦೦

ಸ್ವರ್ಣ 2ನೇ ಹಂತದ ನೀರು ಸರಬರಾಜು ಯೋಜನೆ

೬೫. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಪಟ್ಟಣದ ಸ್ವರ್ಣ ಎರಡನೇ ಹಂತದ ನೀರು ಸರಬರಾಜು ಯೋಜನೆಯ ಪ್ರಸ್ತಾವನೆಯು ಉಡುಪಿ ಪುರಸಭೆಯವರಿಂದ ಮಂಜೂರಾತಿಗಾಗಿ ಸರ್ಕಾರಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಈ ಯೋಜನೆಯನ್ನು ಸರ್ಕಾರವು ಮಂಜೂರಾತಿ ಕೊಡಲು ಕ್ರಮ ಕೈಗೊಂಡಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ (ನಗರಾಭಿವೃದ್ಧಿ ಸಚಿವರು.)—

ಅ) ಈ ಬಗ್ಗೆ, ಮಾನ್ಯ ಮುಖ್ಯ ಮಂತ್ರಿಯವರಿಗೆ ಉಡುಪಿ ಪುರಸಭೆಯ ಅಧ್ಯಕ್ಷರು ಒಂದು ಮನವಿಯನ್ನು ಸಲ್ಲಿಸಿರುತ್ತಾರೆ.

ಆ) ಈ ಮನವಿ ಪರಿಶೀಲನೆಯಲ್ಲಿದೆ.

ಸುಬ್ರಹ್ಮಣ್ಯನಗರ ಕೆರೆ ಅಂಗಳದ ಪ್ರದೇಶದ ಬಗ್ಗೆ ಇರುವ ತಡೆಯಾಜ್ಞೆಯನ್ನು ತೆರವು ಮಾಡಿಸುವುದರ ಬಗ್ಗೆ

೬೯. ಶ್ರೀ ಎಂ ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಸುಬ್ರಹ್ಮಣ್ಯನಗರದ ಕೆರೆಯ ಇಕ್ಕೆಲಗಳಲ್ಲೂ ಖಾಲಿ ಪ್ರದೇಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪ್ರದೇಶ ಕಾರ್ಪೊರೇಷನ್ನಿಗೆ ಸೇರಿದ್ದರೂ, ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇದು ತಮ್ಮದೆಂದು ಹೇಳಿ ಕೋರ್ಟಿನಲ್ಲಿ ತಡೆಯಾಜ್ಞೆ ತಂದಿರುವುದು ಸರ್ಕಾರಕ್ಕೆ ಈ ತಡೆಯಾಜ್ಞೆಯನ್ನು ಯಾವ ತಾರೀಖಿನಲ್ಲಿ ನೀಡಲಾಯಿತು?

ಇ) ಈ ತಡೆಯಾಜ್ಞೆಯನ್ನು ತೆರವು ಮಾಡಬೇಕೆಂದು ಪದೇ ಪದೇ ಶಾಸಕರು ಒತ್ತಾಯ ಪಡಿಸುತ್ತಿದ್ದರೂ ಇದನ್ನು ತೆರವು ಮಾಡದಿರಲು ಕಾರಣವೇನು?

ಈ) ಈಗ ಯಾವ ಹಂತದಲ್ಲಿದೆ, ಮತ್ತು ತಡೆಯಾಜ್ಞೆ ಕೂಡಲೆ ತೆರವು ಮಾಡಲು ಕೈಗೊಳ್ಳುವ ಕ್ರಮಗಳೇನು?

ಶ್ರೀ ಆರ್. ವಿ. ದೇಶಪಾಂಡೆ. (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು ೨೯-೬-೧೯೮೪ರಲ್ಲಿ